iv) ಅಂತಹ ನೌಕರರು ಸಲ್ಲಿಸಿರುವ ಸೇವೆಯು ನ್ಯಾಯಾಲಯಗಳ ಅಥವಾ ನ್ಯಾಯಮಂಡಳಿಗಳ ಆದೇಶಕ್ಕೊಳಪಟ್ಟಿರಬಾರದು.

ನಂತರ ಸರ್ಕಾರವು ಆಗಸ್ಟ್ 2008 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ದಿನಗೂಲಿ ನೌಕರರ ಸಕ್ರಮಾತಿ ವಿಷಯವನ್ನು ಪರಿಶೀಲಿಸಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದೆ.

ಒಳಚರಂಡಿ ಕಾಮಗಾರಿಯು ಸ್ಥಗಿತಗೊಂಡಿರುವುದು

759(793) ಶ್ರೀ ಅಶ್ವತ್ಥ್ ಎಂ ಸಿ:(ಚನ್ನಪಟ್ಟಣ) ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಸ್ಥಗಿತಗೊಳಿಸಲು ಕಾರಣವೇನು; (ಪೂರ್ಣ ಮಾಹಿತಿ ನೀಡುವುದು);

ಇ) ಸ್ಥಗಿತಗೊಳಿಸಿರುವ ಕಾಮಗಾರಿಯನ್ನು ಮತ್ತೆ ಪ್ರಾರಂಭಿಸಲಾಗುವುದೇ;

ಈ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್ ಸುರೇಶ್‌ಕುಮಾರ್:(ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಚನ್ನಪಟ್ಟಣ ನಗರಸಭೆ ಒಳಚರಂಡಿ ಕಾಮಗಾರಿಯನ್ನು ದಿನಾಂಕ:16-11-2007ರಂದು ಪ್ರಾರಂಭಿಸಲಾಗಿದೆ. ಪ್ರಸ್ತುತ ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

ಆ) ಜಲಶುದ್ಧೀಕರಣ ಘಟಕ ಸ್ಥಾಪಿಸಲು ಸ್ಥಳವನ್ನು ಸ್ಥಳೀಯ ಸಂಸ್ಥೆಯ ಹಸ್ತಾಂತರಿಸಿರುವುದಿಲ್ಲ. ಸದರಿ ಸ್ಥಳವನ್ನು ಹಸ್ತಾಂತರಿಸಿದ ನಂತರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.